ಶ್ರೀ ಬಿ. ಜಿ. ಬಣಕಾರ್.—ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಶಾಸಕರು, ಪಾರ್ಲಿಮೆಂಟ್ ಸದಸ್ಯರು ಇರುತ್ತಾರೆ. ಚುನಾಯಿತ ಸದಸ್ಯರಲ್ಲದ ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷರಾಗಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇದು ಅದರ ತತ್ವಕ್ಕೆ ವಿರುದ್ಧವಾಗುತ್ತದೆ. ಸರ್ಕಾರದವರು ಅಧ್ಯಕ್ಷರನ್ನು ನಾಮ ಕರಣ ಮಾಡುವುದನ್ನು ಬಿಟ್ಟು, ಚುನಾಯಿತ ಪ್ರತಿನಿಧಿಗಳನ್ನು ಇದರ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಸೆಕ್ಷನ್ ೧೮೮ ಅನ್ನು ತಿದ್ದುಪಡಿ ಮಾಡಲಿಕ್ಕೆ ಬೇಡಿಕೆ ಏನಾದರೂ ಬಂದಿದೆಯೇ ? ಹಿಂದೆ ಪಂಚಾಯಿತಿ ಗಳ ಸೆಮಿನಾರ್‌ನಲ್ಲಿಯೂ ಇದರ ಬಗ್ಗೆ ಕೇಳಿಕೊಂಡಿದ್ದಾರೆ. ತಾವು ಇದಕ್ಕೆ ಸೂಕವಾದ ತಿದ್ದುಪಡಿ ಯನ್ನು ತಂದು, ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಸ್ಥಾನ ಚುನಾಯಿತ ಪ್ರತಿನಿಧಿಗಳಿಗೆ ದೊರಕುವಂತೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಇದು ಬಹಳ ಸೂಕ್ತವಾದ ಸಲಹೆ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಸಭೆಗಳಿಗೆ ಪ್ರೆಸ್‌ನವರನ್ನು ಕೆಲವು ಕಡೆ ಬಿಡುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರೆಸ್ ಬಹಳ ಮುಖ್ಯವಾದುದು. ಆದ್ದರಿಂದ ಇವರನ್ನೂ ಈ ಸಮಿತಿಗಳ ಮೀಟಿಂಗ್‌ಗೆ ಕರೆಯುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಸರ್ಕಾರದ ವಿಚಾರಗಳ ಬಗ್ಗೆ ಮಾತನಾಡುವಾಗ ಪ್ರೆಸ್‌ನವರನ್ನು ಕರೆಯಬೇಕು ಎಂದು ಇದೆ. ಸಾರ್ವತ್ರಿಕವಾದ ಸಂಸ್ಥೆಗಳಲ್ಲಿ ಪ್ರಸ್ತಾಪ ಮಾಡುವಂಥಾದ್ದಕ್ಕೂ ಪ್ರೆಸ್ ನವರನ್ನು ಆಲೋ ಮಾಡುವುದು ಎಂದು ನನ್ನ ಭಾವನೆ. ಇದನ್ನು ನಾನು ಸೂಕ್ತವಾದ ರೀತಿಯಲ್ಲಿ ಯೋಚನೆ ಮಾಡಿ ನಿರ್ದೇಶನವನ್ನು ಕಳುಹಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ —ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಅಭಿವೃದ್ಧಿ ಕಾರ್ಯಗಳು ಆಗಂ ತ್ತವೆ. ಇವುಗಳನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಈ ಉದ್ದೇಶದಿಂದ ಹಿಂದಿನ ವರ್ಷ ಮಾಡಿದಂಥ ಕಾಯಗಳ ವಿವರಗಳನ್ನು ಮುದ್ರಿಸಿ, ವರ್ಷಕ್ಕೊಂದು ಸಾರಿ ಆಯಾ ಜಿಲ್ಲೆಯ ಶಾಸಕರಿಗೆ, ತಾಲ್ಲೂಕು ಬೋರ್ಡು ಸದಸ್ಯರಿಗೆ ಮತ್ತು ಪಾರ್ಲಿಮೆಂಟ್ ಸದಸ್ಯರಿಗೆ ಹಾಗೂ ಇನ್ನುಳಿದ ಪಂಚಾಯಿತಿ ಸದಸ್ಯರುಗಳಿಗೆ ಕೊಡಲಿಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಇದೂ ಸಹ ಪರಿಶೀಲನೆ ಮಾಡಬೇಕಾದಂಥ ಹಾಗೂ ಗಂಭೀರವಾದಂಥ ಸಲಹೆ.

Stipend Granted to Nursing Students

(730) SRI J. L. KABADE (Balloli).—

Will the Minister for Health be pleased to state :—

(*a*) the action taken to help the student of 2 years nursing degree course who have to incur extra expenditure towards books etc. in addition of fees of admission, tution and examination;

(*b*) whether it is not a fact that the Students of Nursing Degree Course have urged the Government to grant stipend of Rs. 200 p. m. as they are unable to bear the expenditure ;

(*c*) the amount of stipend granted to Ward Administrative Course Diploma, Nursing Home Education and Pharmacist Students by the Director of Health and Family Planning Services Bangalore as per G. O No. HMA 77 MSM 71, dated 19-3-1973 and letter No. P. R. M. F. R. 26 ;

(*d*) whether it is not a fact that the stipend is being paid to the students deputed for training in the State Nursing College as per 62 of K. C. S. R.;

(*e*) the concession extended to the Harijan and Girijan Students in the above training course ?

SRI H. SIDDAVEERAPPA (Minister for Health).—

(*a*) The grant of Special remuneration to the students of this Course is under the consideration of Government.

(*b*) Yes.

(*c*) The stipend given per month is as follows : —

1. Ward Administrative Course Rs. 50
2. D. P. N. Course Rs, 100 (Government of India)
3. Pharmacist Students Rs. 100. There is no Home Education Course here.

(*d*) No. The pay and allowances of the candidates deputed by the department is paid as per Rule 61 of K.C.S.R.

(*e*) Reservation of 18 per cent and 3 per cent seats have been made for Harijan and Girijan students respectively.

ಶ್ರೀ ಜೆ. ಎಲ್. ಕಬಾಡಿ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಇದಕ್ಕಾಗಿ ವಿಶೇಷ ವೇತನವನ್ನು ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು, ತಿಳಿಸಿದ್ದೀರಿ, ಇದರ ಬಗ್ಗೆ ಸೂಚನೆಗಳು ಯಾವ ಯಾವ ರೀತಿಯಲ್ಲಿ ಬಂದಿವೆ ?

† ಶ್ರೀ ಎಚ್. ಸಿದ್ದವೀರಪ್ಪ —ಮೊದಲು ವಾರ್ಡ್ ಅಡ್ಮಿನಿಸ್ಟ್ರೇಟಿವ್ ಕೋರ್ಸಿಗೆ ತಿಂಗಳಿಗೆ ೫೦ ರೂಪಾಯಿಗಳ ಸ್ಟೈಫಂಡ್ ಕೊಡುತ್ತಿದ್ದೆವು. ಇದಕ್ಕೆ ಪುಸ್ತಕಗಳು ಎಲ್ಲಾ ಸೇರಿ ಮೊದಲನೆಯ ವರ್ಷ ೩೦೨ ರೂಪಾಯಿಗಳು, ಎರಡನೆಯ ವರ್ಷ ೨೮೪ ರೂಪಾಯಿಗಳ ಖರ್ಚು ಆಗುತ್ತದೆ ಇದರಲ್ಲಿಯೂ ನಾವು ಅವರಿಗೆ ಸ್ವಲ್ಪ ಸಹಾಯ ಮಾಡಬೇಕು ಎಂದು ಸೂಚನೆ ಬಂದಿದೆ. ಎಷ್ಟು ಎಂದು ನಿರ್ದಿಷ್ಟವಾಗಿ ಹೇಳಿಲ್ಲ.

ಶ್ರೀ ಜಿ ಎಲ್ ಕಬಾಡಿ.—ಪ್ರತಿವರ್ಷವೂ ಈ ಟ್ರೈನಿಂಗ್‌ಗೆ ಆರಿಸುವಲ್ಲಿ ಯಾವಾಗಲೂ ಶೇಕಡ ೧೫ ಪರ್ಸೆಂಟ್ ಅನ್ನು ಹರಿಜನಗಿರಿಜನರಿಗೋಸ್ಕರ ಮೀಸಲಾಗಿಡುತ್ತಿದ್ದರು. ಈ ವರ್ಷ ಒಂದು ಪರ್ಸೆಂಟ್ ಅನ್ನೂ ಹರಿಜನ ಗಿರಿಜನರಿಗೆ ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್ ಸಿದ್ದವೀರಪ್ಪ.—ಇದು ನನ್ನ ಗಮನಕ್ಕೆ ಬಂದಿಲ್ಲ. ವಿಚಾರ ಮಾಡುತ್ತೇನೆ ತಾವು ಹೇಳಿದ ರೀತಿಯಲ್ಲಿ ಆಗಿದ್ದರೆ. ಇದನ್ನು ಮೇಕ್ ಅಫ್ ಮಾಡಿಕೊಡಿ ಎಂದು ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ತಾವು ಕೊಡುತ್ತಿರುವ ೫೦ ರೂಪಾಯಿಗಳ ಸ್ಟೈಫಂಡ್‌ನಿಂದ ನರ್ಸ್‌ಗಳಿಗೆ ಒಂದು ಊಟ ಕೂಡ ಮಾಡುವುದಕ್ಕಾಗುತ್ತಿಲ್ಲ. ತಾವು ಇದನ್ನು ವಿಚಾರ ಮಾಡಿ, ನರ್ಸ್‌ಗಳಿಗೆ ಹೆಚ್ಚಿಗೆ ಸ್ಟೈಫೆಂಡ್ ಕೊಡುವಂತೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು ಕೊಡತಕ್ಕ ೫೦ ರೂಪಾಯಿಗಳಿಂದ ಅವರು ಜೀವನ ಮಾಡುವುದಕ್ಕಾಗುವುದಿಲ್ಲ. They will have to supplement it. It is only like a scholarship that we give to students.

ಶ್ರೀ ಜಿ ಎಲ್. ಕಬಾಡಿ.—ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುತ್ತಿರುವುದು ನಿಜವಲ್ಲವೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಈ ಇಂಪಾಪಯಿಂದಲ್ಲ ಎಂದು ಹೇಳಿದ್ದೀರಿ. ನರ್ಸಿಂಗ್ ಡಿಗ್ರಿ ಕೋರ್ಸಿಗೆ ಕೆ.ಸಿ ಎಸ್ ಆರ್.-೬೧ರ ರೂಲ್ ಪ್ರಕಾರ ಎಷ್ಟು ಇವರಿಗೆ ಸಂಬಳ ಕೊಡುತ್ತೀರಿ ? ಇವರಿಗೆ ಏನಾದರೂ ಭತ್ಯ ಇದೆಯೇ ? ಟ್ರೈನಿಂಗ್ ಸಲುವಾಗಿ ಸ್ಪೆಷಲ್ ಪೇ ಏನಾದರೂ ಕೊಡುತ್ತೀರಾ ಎನ್ನುವುದನ್ನು ತಿಳಿಸಬೇಕು ?

SRI H SIDDAVEERAPPA.—There is a Government order, according to which, departmental candidates deputed for P.D.M. course are to be paid their pay and allowances as per rule 61 of K.C.S. Rules and not as per rule 62. That is what I have stated.

ಶ್ರೀ ಜಿ ಎಲ್. ಕಬಾಡಿ.—ರೂಲ್ ೬೨ರ ಪ್ರಕಾರ, ಬೇರೆ ರಾಜ್ಯಗಳಲ್ಲಿ ಟ್ರೈನಿಂಗ್ ಮಾಡತಕ್ಕ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ೨೦೦ ರೂಪಾಯಿಗಳ ಭತ್ಯ ಕೊಡುತ್ತಿದ್ದಾರೆ. ಇಲ್ಲಿ ಟ್ರೈನಿಂಗ್ ಮಾಡತಕ್ಕ ವಿದ್ಯಾರ್ಥಿಗಳಿಗೆ ತಾವು ಭತ್ಯ ಕೊಡದೆ ಇರುವುದಕ್ಕೆ ಕಾರಣ ಏನು ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ವ್ಯತ್ಯಾಸ ಆಗಿದ್ದರೆ, I will get it examined.

Financial Corporation for Upliftment of Ryots

859. SRI ANDANIAH (Kunigal).—

Will the Minister for Co-operation be pleased to state :—

(*a*) whether the Government has any plan or scheme to assist the ryots of the state financially or otherwise for their upliftment ;

(*b*) if so, whether the Government has any proposal to set up a separate finance corporation for the above purpose ?

SRI S. M. KRISHNA (Minister for Industries and Parliamentary Affairs).—[On behalf of SRI K. H. RANGANATH (Minister for Co-operation).—

(*a*) Yes. A large number of schemes in our Five Year Plan and Annual Plans are meant for the Social and Economic Development of the ryots of the State. There are many other schemes in which Refinance by the Agricultural Refinance Corporation and the International Development Association (World Bank) is obtained which are meant for the social and economic development of the ryots in the State.

(*b*) No.

ಶ್ರೀ ಆಂದಾನಯ್ಯ.—ಸ್ವಾಮಿ, (ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದ ರೈತರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆ ಹಾಗೂ ವಾರ್ಷಿಕ ಯೋಜನೆಗಳಲ್ಲಿ ವಿವಿಧರೀತಿಯ ಯೋಜನೆಗಳಿದ್ದು, ಕೃಷಿ ಪುನರ್‌ವಿತ್ತೀಯ ಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಜಾಗತಿಕ ಬ್ಯಾಂಕ್)ಗಳಿಂದ ಪುನಃ ಹಣ ಪಡೆಯಲು ಅನೇಕ ಇತರ ಯೋಜನೆಗಳಿವೆ ಎಂದು ಹೇಳಿದ್ದೀರಿ. ಆ ಯೋಜನೆಗಳು ಯಾವುವು, ಅದರಿಂದ ಯಾವರೀತಿ ಸಹಾಯವಾಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ?

† ಎಸ್. ಎಂ. ಕೃಷ್ಣ.—ಈ ಪಂಚವಾರ್ಷಿಕ ಯೋಜನೆಗೆ ರಾಜ್ಯ ಸರ್ಕಾರದ ಯೋಜನೆಗಳೂ ಇವೆ, ಕೇಂದ್ರ ಸರ್ಕಾರದ ಯೋಜನೆಗಳೂ ಇವೆ, ಮತ್ತು ಪ್ರಾಮುಖ್ಯವಾಗಿ ಅಗ್ರಿಕಲ್‌ಚರಲ್ ರೀಫೈನಾನ್ಸ್ ಕಾರ್ಪೊರೇಷನ್‌ನಿಂದ ನಮ್ಮ ಸ್ಟೇಟ್ ಲೆವಲ್‌ನಲ್ಲಿ ಅಪೆಕ್ಸ್ ಬ್ಯಾಂಕ್ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಮತ್ತು ಕೋ ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಇವುಗಳ ಮೂಲಕ ಹಣ ಕೊಡುವುದಕ್ಕೆ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ, ಮಾರ್ಜಿನಲ್ ಫಾರ್ಮರ್ಸ್ ಏಜೆನ್ಸಿ ಇವುಗಳೆಲ್ಲಾ ಇವೆ, ಕೇಂದ್ರ ಸರ್ಕಾರದವರು ಕೂಡ ತಕ್ಕಂಥ ಹಣವನ್ನು ಇವುಗಳ ಮೂಲಕ ರಾಜ್ಯ ಸರ್ಕಾರದವರಿಗೆ ರೂಟ್ ಮಾಡುತ್ತಾರೆ. ಮೈನರ್ ಇರಿಗೇಷನ್ ಲ್ಯಾಂಡ್ ಡೆವಲಪ್‌ಮೆಂಟ್, ಸಾಯಿಲ್ ಕನ್‌ಸರ್ವೇಷನ್ ಹಾರ್ಟಿಕಲ್‌ಚರ್, ಡೈರಿ ಡೆವಲಪ್‌ಮೆಂಟ್, ಫೌಲ್ಟ್ರಿ, ಷೀಪ್ ಬ್ರೀಡಿಂಗ್, ಸ್ಟೋರೇಜ್, ಕೋಲ್ಡ್ ಸ್ಟೋರೇಜ್ ಮಾರ್ಕೆಟಿಂಗ್, ಫಿಷರೀಸ್ ಫಾರಂ ಮೆಕನೈಸೇಷನ್ ಈ ಎಲ್ಲಾ ಬಾಬುಗಳಿಗೂ ಹಣ ದೊರೆಯುತ್ತದೆ.